## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1268 |
| ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 22.09.2022 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಪ್ರಶ್ನೆ | ಉತ್ತರ |
|---|---|
| ಅ) ದಿನಾಂಕ: 01.07.1984ರ ನಂತರ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದಿನಗೂಲಿ ನೌಕರರ ಸೇವೆಯನ್ನು ಸಕ್ರೀಯಗೊಳಿಸಿರುವ ಬಗ್ಗೆ ಆರ್ಥಿಕ ಇಲಾಖೆಯ ಕಡತ ಸಂಖ್ಯೆ: ಆಇ/97/ವಾತೆಇ/2008ರ ಕಡತಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯ ಪಡೆಯಲಾಗಿದೆಯೇ; ಪಡೆದಿದ್ದಲ್ಲಿ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕಡತ ಸಂಖ್ಯೆ: ಆಇ/97/ವಾತೆಇ/2008 ಕಡತದಲ್ಲಿನ ವಿಷಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ಶ್ರೀ ಬಸವಯ್ಯಸ್ವಾಮಿ ಇವರನ್ನು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾಗಿ ನೇಮಕ ಮಾಡುವುದಕ್ಕೆ ಸಂಬಂಧಿಸಿದ್ದು, ಸದರಿ ಕಡತವನ್ನು ದಿನಾಂಕ: 26.09.2014ರಂದು 'ಡಿ' ವರ್ಗದಲ್ಲಿ ಮುಕ್ತಾಯಗೊಳಿಸಲಾಗಿದೆ. ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) ಶ್ರೀ ಎಂ. ಸಿ. ಮಾಯೀಗೆ ಗೌಡ, ದ್ವಿತೀಯ ದರ್ಜೆ ಸಹಾಯಕ, ಇವರ ವೈದ್ಯಕೀಯ ವೆಚ್ಚದ ಮರುಪಾವತಿ ಬಗ್ಗೆ ಆರ್ಥಿಕ ಇಲಾಖೆ ಕಡತ ಸಂಖ್ಯೆ: ಆಇ/31/ವಾತೆ/2015, ಕಡತಕ್ಕೆ ಸಿ.ಆ.ಸು.ಇ ಇಲಾಖೆಯ ಅಭಿಪ್ರಾಯ ಪಡೆಯಲಾಗಿದೆಯೇ; ಪಡೆದಿದ್ದಲ್ಲಿ ಅದರ ಪ್ರತಿ ಹಾಗೂ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು). | ಹೌದು, ಶ್ರೀ ಎಂ. ಸಿ. ಮಾಯೀಗೆ ಗೌಡ, ದ್ವಿತೀಯ ದರ್ಜೆ ಸಹಾಯಕ, ಇವರ ವೈದ್ಯಕೀಯ ವೆಚ್ಚದ ಮರುಪಾವತಿ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯವನ್ನು ಪಡೆದಿರುವ ಪ್ರತಿಗಳನ್ನು ಹಾಗೂ ದಿನಾಂಕ: 04.06.2018ರ ಸರ್ಕಾರದ ಆದೇಶದ ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಇ) ದಿನಾಂಕ: 01.07.1984ರ ನಂತರ ವಾಣಿಜ್ಯ ತೆರಿಗೆ ಇಲಾಖೆ ದಿನಗೂಲಿ | ಹೌದು.<br>ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ: 10.08.2006 ಮತ್ತು |



Generated from eOffice by G JAGADEESHA, CMO-JS(GJ), JOINT SECRETARY, CMO on 03/11/2022 11:09 AM

<table>
<tr>
<td>ನೌಕರರ ಸೇವೆಯನ್ನು ಸಕ್ರೀಯಗೊಳಿಸಿರುವ ಬಗ್ಗೆ ಆರ್ಥಿಕ ಇಲಾಖೆ ಕಡತ ಸಂಖ್ಯೆ: FD/37/CSM/2018 (ಕಂಪ್ಯೂಟರ್ ನಂ.197700) ಕಡತಕ್ಕೆ ಸಿ.ಆ.ಸು.ಇ ಇಲಾಖೆ ಅಭಿಪ್ರಾಯ ಪಡೆಯಲಾಗಿದೆಯೇ, ಪಡೆದಿದ್ದಲ್ಲಿ ಇಲಾಖೆಯು ಕೈಗೊಂಡ ಕ್ರಮಗಳೇನು; (ವಿವರ ಹಾಗೂ ಪ್ರತಿ ಒದಗಿಸುವುದು).</td>
<td>06.01.2007ರ ಆದೇಶಗಳನ್ವಯ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಿರುವ ಆದೇಶವನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮತ್ತು ಗೌರವಾನ್ವಿತ ಉಚ್ಚ ನ್ಯಾಯಾಲಯಗಳು ಪರಿಗಣಿಸಿದ್ದು, ಈ ರೀತಿ ಸಕ್ರಮಗೊಂಡ ಹನ್ನೊಂದು ನೌಕರರ ಜೇಷ್ಠತೆಯ ಪ್ರಕರಣವನ್ನು ಪರಿಗಣಿಸುವಾಗ, ಕ್ರಮಬದ್ಧಗೊಳಿಸುವಿಕೆಯ ಆದೇಶವನ್ನು ಪುನರ್ ಪರಿಶೀಲಿಸಲು ಅಥವಾ ರದ್ದುಗೊಳಿಸಲು ಮಾನ್ಯ ನ್ಯಾಯಮಂಡಳಿ / ನ್ಯಾಯಾಲಯ ರಾಜ್ಯ ಸರ್ಕಾರಕ್ಕೆ ಸ್ವಾತಂತ್ರವನ್ನು ಕಾಯ್ದಿರಿಸಿಲ್ಲವಾದುದರಿಂದ ಸದರಿ ಸಕ್ರಮಾತಿಗಳನ್ನು ಪುನರ್ ಪರಿಶೀಲಿಸದಿರಲು ತೀರ್ಮಾನಿಸಲಾಗಿರುತ್ತದೆ.</td>
</tr>
<tr>
<td>ಈ) ರಾಜ್ಯದಲ್ಲಿ ದಿನಾಂಕ: 01.07.1984ರ ನಂತರ ವಿವಿಧ ಇಲಾಖೆಗಳಲ್ಲಿ ಎಷ್ಟು ಹುದ್ದೆಗಳನ್ನು ದಿನಗೂಲಿ ನೌಕರರಾಗಿ ನೇಮಕ ಮಾಡಲಾಗಿದೆ; (ಇಲಾಖಾವಾರು ವಿವರ ನೀಡುವುದು).</td>
<td>ರಾಜ್ಯದಲ್ಲಿ ದಿನಾಂಕ: 01.07.1984ರ ನಂತರ ವಿವಿಧ ಕೆಳಕಂಡ ಇಲಾಖೆಗಳಲ್ಲಿ ನೇಮಕ ಮಾಡಲಾದ ದಿನಗೂಲಿ ನೌಕರರ ವಿವರ:-
<table>
<tr><th>ಕ್ರ. ಸಂ.</th><th>ಇಲಾಖೆಯ ಹೆಸರು</th><th>ದಿ: 01.07.84ರ ನಂತರ ತೊಡಗಿಸಲಾದ ದಿನಗೂಲಿ ನೌಕರರ ಸಂಖ್ಯೆ</th></tr>
<tr><td>1</td><td><u>ಆರ್ಥಿಕ ಇಲಾಖೆ:-</u><br>1. ರಾಜ್ಯ ಲೆಕ್ಕಪತ್ರ ಇಲಾಖೆ<br>2. ವಾಣಿಜ್ಯ ತೆರಿಗೆ ಇಲಾಖೆ</td><td>2<br>357</td></tr>
<tr><td>2</td><td><u>ಶಿಕ್ಷಣ ಇಲಾಖೆ:-</u><br>1. ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆ<br>2. ತಾಂತ್ರಿಕ ಶಿಕ್ಷಣ ಇಲಾಖೆ<br>3. ಕಾಲೇಜು ಶಿಕ್ಷಣ ಇಲಾಖೆ</td><td>421<br>1<br>55</td></tr>
<tr><td>3</td><td>ಲೋಕೋಪಯೋಗಿ ಇಲಾಖೆ</td><td>1092</td></tr>
<tr><td>4</td><td>ಜಲಸಂಪನ್ಮೂಲ ಇಲಾಖೆ</td><td>2242</td></tr>
<tr><td>5</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ</td><td>103</td></tr>
<tr><td>6</td><td><u>ಸಮಾಜ ಕಲ್ಯಾಣ ಇಲಾಖೆ:-</u><br>1. ಸಮಾಜ ಕಲ್ಯಾಣ ಇಲಾಖೆ<br>2. ಹಿಂದುಳಿದ ವರ್ಗಗಳ ಇಲಾಖೆ</td><td>661<br>81</td></tr>
<tr><td>7</td><td><u>ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ:-</u><br>1. ಪ್ರವಾಸೋದ್ಯಮ ಇಲಾಖೆ<br>2. ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br>3. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ</td><td>34<br>47<br>26</td></tr>
<tr><td>8</td><td><u>ಯುವಜನ ಸೇವಾ ಇಲಾಖೆ:-</u></td><td>31</td></tr>
</table>
</td>
</tr>
</table>

| | | |
|---|---|---|
| 9 | ವಾಣಿಜ್ಯ [illegible] ಕ್ರೀಡಾ ಇಲಾಖೆ | |
| | 1. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | 17 |
| | 2. ರೇಷ್ಮೆ ಇಲಾಖೆ | 865 |
| | 3. ಗಣಿ ಮತ್ತು ಭೂವಿಜ್ಞಾನ ಇಲಾಖೆ | 47 |
| 10 | ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ:- | |
| | 1. ಮೀನುಗಾರಿಕೆ ಇಲಾಖೆ | 51 |
| | 2. ಪಶುಪಾಲನಾ & ಪಶುವೈದ್ಯ ಸೇವಾ ಇಲಾಖೆ | 112 |
| 11 | ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆ:- | |
| | 1. ಅರಣ್ಯ ಇಲಾಖೆ | 5690 |
| 12 | ಕೃಷಿ ಮತ್ತು ತೋಟಗಾರಿಕೆ ಇಲಾಖೆ:- | |
| | 1. ತೋಟಗಾರಿಕೆ ಇಲಾಖೆ | 866 |
| | 2. ಕೃಷಿ ಇಲಾಖೆ | 58 |
| 13 | ಕಂದಾಯ ಇಲಾಖೆ:- | |
| | 1. ಕಂದಾಯ ಇಲಾಖೆ | 34 |
| 14 | ಸಹಕಾರ ಇಲಾಖೆ:- | |
| | 1. ಕೃಷಿ ಮಾರಾಟ ಇಲಾಖೆ | 61 |
| 15 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:- | |
| | 1. ಆಹಾರ & ನಾಗರೀಕ ಸರಬರಾಜು ಇಲಾಖೆ | 6 |
| 16 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:- | |
| | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 1 |
| 17 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 4109 |
| | ಒಟ್ಟು | 17,070 |

ಆಇ 266 ವಾತೆಸಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECRETARY, CMO on 03/11/2022 11:59 AM

**Annx - 1**



16/09/2022 Section Officer CTII > Section Officer CTII Mr/Mrs. Vani.KS ( 1739781) SignOut

## ಕಡತದ ವಿವರಗಳು

| | |
|---|---|
| ಕಂಪ್ಯೂಟರ್ ಕಡತ ಸಂಖ್ಯೆ: | 53792 |
| ಕಡತ ಸಂಖ್ಯೆ : | FD97CSM2008 |
| ವಿಷಯ: | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಶ್ರೀ ಬಸಯ್ಯಸ್ವಾಮಿ, ಇವರನ್ನು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಾ.ತೆ.ಸ.ಅ.ರಾಗಿ ನೇಮಕ ಮಾಡುವ ಬಗ್ಗೆ. |
| ಈ ಕಡತವನ್ನು ಸೃಷ್ಟಿಸಿದ ಶಾಖೆ ಮತ್ತು ಹುದ್ದೆ: | Section Officer CTII.Section Officer CTII |
| ಕಡತದ ವರ್ಗ | Others |
| ಕಡತದ ವಿಧ | Main File |
| ತೆರೆದಿದ್ದು | 22/08/2008 |

ಕಡತದಲ್ಲಿನ ಪತ್ರಗಳನ್ನು ವೀಕ್ಷಿಸಿ ಲಗತ್ತಿಸಲಾದ ಕಡತಗಳನ್ನು ವೀಕ್ಷಿಸಿ

## ಕಡತದ ಚಲನ-ವಲನದ ಇತಿಹಾಸ

| | | | | | | | | | | |
|---|---|---|---|---|---|---|---|---|---|---|
| 21 | Finance Department | Section Officer CTII | Section Officer CTII | Finance Department | Section Officer CTII | Section Officer CTII | 26/09/2014 | No Further Action | File Closed | |
| 20 | DPAR Department | Principal Secretary | Principal Secretary | Finance Department | Section Officer CTII | Section Officer CTII | 15/09/2014 | For Necessary Action | Acknowledged | View |
| 19 | DPAR Department | Principal Secretary | Principal Secretary | Finance Department | Section Officer CTII | Section Officer CTII | 15/09/2014 | For Necessary Action | In Transit | View |
| 18 | Chief Secretary Office | Chief Secretary Office | Chief Secretary | DPAR Department | Principal Secretary | Principal Secretary | 15/09/2014 | For Necessary Action | Acknowledged | View |
| 17 | Chief Secretary Office | Chief Secretary Office | Chief Secretary | DPAR Department | Principal Secretary | Principal Secretary | 22/07/2011 | For Necessary Action | In Transit | View |
| 16 | DPAR Department | Principal Secretary | Principal Secretary | Chief Secretary Office | Chief Secretary Office | Chief Secretary | 22/07/2011 | For Necessary Action | Rejected | View |
| 15 | DPAR Department | Principal Secretary | Principal Secretary | Chief Secretary Office | Chief Secretary Office | Chief Secretary | 22/06/2011 | For Necessary Action | In Transit | View |
| 14 | DPAR Department | Special Secretary, Service Rules | Special Secretary, Service Rules | DPAR Department | Principal Secretary | Principal Secretary | 10/11/2008 | For Necessary Action | Acknowledged | View |
| 13 | DPAR Department | Special Secretary, Service Rules | Special Secretary, Service Rules | DPAR Department | Principal Secretary | Principal Secretary | 10/11/2008 | For Necessary Action | In Transit | View |
| 12 | DPAR Department | Section OfficerA, Service Rules | Section OfficerA, Service Rules | DPAR Department | Special Secretary, Service Rules | Special Secretary, Service Rules | 14/10/2008 | For Necessary Action | Acknowledged | View |
| 11 | DPAR Department | Section OfficerA, Service Rules | Section OfficerA, Service Rules | DPAR Department | Special Secretary, Service Rules | Special Secretary, Service Rules | 14/10/2008 | For Necessary Action | In Transit | View |
| 10 | Finance Department | Section Officer CTII | Section Officer CTII | DPAR Department | Section OfficerA, Service Rules | Section OfficerA, Service Rules | 14/10/2008 | For Necessary Action | Acknowledged | View |
| 9 | Finance Department | Section Officer CTII | Section Officer CTII | DPAR Department | Section OfficerA, Service Rules | Section OfficerA, Service Rules | 14/10/2008 | For Necessary Action | In Transit | View |
| 8 | Finance Department | Deputy Secretary BR | Deputy Secretary BR | Finance Department | Section Officer CTII | Section Officer CTII | 05/09/2008 | For Necessary Action | Acknowledged | View |
| 7 | Finance Department | Deputy Secretary BR | Deputy Secretary BR | Finance Department | Section Officer CTII | Section Officer CTII | 05/09/2008 | For Necessary Action | In Transit | View |
| 6 | Finance Department | Section Officer CTII | Section Officer CTII | Finance Department | Deputy Secretary BR | Deputy Secretary BR | 05/09/2008 | For Necessary Action | Acknowledged | View |

ANNX-2

ವಿಷಯ: ಶ್ರೀ ಎಂ.ಸಿ. ಮಾಯೀಗೇಗೌಡ, ದ್ವಿ.ದ.ಸ. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ (ಆಡಳಿತ) ಕಛೇರಿ ಇವರ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು.

ಸಿಆಸುಇ 297 ಸೇನಿಸಿ 2015
~~ತಇ 31 ವಾತೆಸಿ 2015~~

**ಟಿಪ್ಪಣಿ ಹಾಳೆ** ಸಿಆಸುಇ (ಸೇವಾ ನಿಯಮಗಳು-ಸಿ)

ದಿನಾಂಕ: 24.11.2015.

29. ಪ್ರಸ್ತಾವನೆಯನ್ನು ಪರಿಶೀಲಿಸಲು ಈ ಕೆಳಕಂಡ ಮಾಹಿತಿಯನ್ನು ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ:-

1. ಶ್ರೀ ಎಂ.ಸಿ. ಮಾಯೀಗೇಗೌಡ ಇವರನ್ನು ದಿನಗೂಲಿ ನೌಕರರನ್ನಾಗಿ ನೇಮಕಾತಿ ಮಾಡಿದ ಆದೇಶದ ಪ್ರತಿ.
2. ಶ್ರೀ ಎಂ.ಸಿ. ಮಾಯೀಗೇಗೌಡ ಇವರನ್ನು ದಿನಗೂಲಿ ಸೇವೆಯಿಂದ ಸಕ್ರಮಗೊಳಿಸಿ ಹೊರಡಿಸಿರುವ ಆದೇಶದ ಪ್ರತಿ.
3. ದಿನಾಂಕ: 01.07.1984ರ ನಂತರ ತೊಡಗಿಸಲಾದ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಕುರಿತ ಸಿವಿಲ್ ಅಪೀಲು ಸಂಖ್ಯೆ: 3595-3612/99 ಮತ್ತು ಸಿವಿಲ್ ಅಪೀಲು ಸಂಖ್ಯೆ: 1861-2063/2001 ಮತ್ತಿತರ ಸಿವಿಲ್ ಅಪೀಲುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ನೀಡಿದ ದಿನಾಂಕ: 10.04.2006ರ ತೀರ್ಪಿನ ಹಿನ್ನೆಲೆಯಲ್ಲಿ, ದಿನಾಂಕ: 25.05.2006ರ ಸುತ್ತೋಲೆ ಸಂಖ್ಯೆ: ಸಿಆಸುಇ 25 ಎಸ್‌ಎಲ್‌ಸಿ 2003, ದಿನಾಂಕ: 06.07.2006ರ ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇಸ್ಥಅ 2003, ಹಾಗೂ ದಿನಾಂಕ: 13.11.2006ರ ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇಸ್ಥಅ 2003(ಭಾ)ರಲ್ಲಿ ದಿನಾಂಕ: 01.07.1984ರ ನಂತರ ಸೇವೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಬಗ್ಗೆ ಸ್ಪಷ್ಟವಾದ ಸೂಚನೆಗಳನ್ನು ನೀಡಲಾಗಿದೆ.

30) ಈ ರೀತಿ ಸೂಚನೆಗಳನ್ನು ನೀಡಿದ್ದರೂ ಸಹ ಪ್ರಸ್ತಾವನೆಯಲ್ಲಿರುವ ನೌಕರರನ್ನು ಸಕ್ರಮಗೊಳಿಸಿರುವ ಬಗ್ಗೆ ಸ್ಪಷ್ಟೀಕರಣ.

(ಸರ್ಕಾರದ ವಿಶೇಷ ಕಾರ್ಯದರ್ಶಿ
ಸಿಆಸುಇ (ಸೇನಿ) ರವರಿಂದ ಅನುಮೋದಿತ)

(ಡಾ|| ಮಂಗಳ ಜಿ.ಎಸ್.) 24/11/15
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

31) ಸರ್ಕಾರದ ಉಪ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ (ಆಡಳಿತ ಮತ್ತು ಸಮನ್ವಯ).

26/11/15
US (CT-2)

26/11

26/11

ಎ-ಜಾಖ

ವಿಷಯ: ಶ್ರೀ.ಎಂ.ಸಿ.ಮಾಯೀಗೇಗೌಡ, ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ಇಲಾಖೆ, ಇವರ ವೈದ್ಯಕೀಯ ವೆಚ್ಚ ಮರುಪಾವತಿ ಬಗ್ಗೆ

ಆಇ 31 ವಾತೆಸಿ 2015

ಸಂಖ್ಯೆ: ಸಿಆಸುಇ 257 ಸೇನಿಸಿ 2016
ಆಇ 31 ವಾತೆಸಿ 2015

ಸಿಆಸುಇ(ಸೇವಾ ನಿಯಮಗಳು-ಸಿ)
ದಿನಾಂಕ: 08.03.2017

62. ಶ್ರೀ ಎಂ.ಸಿ. ಮಾಯೀಗೇಗೌಡ ಇವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡಿರುತ್ತಾರೆ. ವಾಣಿಜ್ಯ ತೆರಿಗೆ ಇಲಾಖೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಪ್ರಕರಣದಲ್ಲಿ ದಿನಾಂಕ: 10.4.2006ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಯು ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇಸ್ಥಅ 2003, ದಿನಾಂಕ: 25.5.2006ರಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಇವರನ್ನು ದಿನಾಂಕ: 10.8.2006ರಂದು ಸಕ್ರಮಗೊಳಿಸಿರುತ್ತದೆ.

63. ತದನಂತರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ: 13.11.2006ರಂದು ಮತ್ತೊಂದು ಸುತ್ತೋಲೆಯಲ್ಲಿ ಹೊರಡಿಸಿ ದಿನಾಂಕ: 25.5.2006ರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಮಾರ್ಪಡಿಸಿರುತ್ತದೆ. ಅಲ್ಲದೇ, ದಿನಾಂಕ: 1.7.1984ರ ನಂತರ ನೇಮಕಗೊಂಡ ದಿನಗೂಲಿ ನೌಕರರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿನ ನಾಲ್ಕನೇ ಷರತ್ತನ್ನು ಪೂರೈಸುವುದಿಲ್ಲವಾದ್ದರಿಂದ ಸಕ್ರಮಾತಿಗೆ ಅರ್ಹರಲ್ಲವೆಂದು ತಿಳಿಸಿರುತ್ತದೆ. ಅಲ್ಲದೇ, ದಿನಾಂಕ: 25.5.2006ರ ಸುತ್ತೋಲೆಯನ್ವಯ ದಿನಗೂಲಿ ನೌಕರರನ್ನು ಸಕ್ರಮಾತಿಗೊಳಿಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಪುನರ್ ಪರಿಶೀಲಿಸಿ ಸಕ್ರಮಾತಿ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಸೂಚಿಸಲಾಗಿದೆ.

64. ಶ್ರೀ ಎಂ.ಸಿ. ಮಾಯೀಗೇಗೌಡ ಇವರ ಪ್ರಕರಣವೂ ಸಹ ದಿನಾಂಕ: 13.11.2006ರ ಸುತ್ತೋಲೆಯಲ್ಲಿನ ಸೂಚನೆಗಳ ವ್ಯಾಪ್ತಿಗೆ ಬರುತ್ತದೆ. ಅವರ ಸಕ್ರಮಾತಿಗೆ ಯಾವುದೇ ನ್ಯಾಯಾಲಯದ ಆದೇಶ ಇರುವುದಿಲ್ಲ. ಹಾಗಾಗಿ, ದಿನಾಂಕ: 25.5.2006ರ ಸುತ್ತೋಲೆಯಂತೆ ಸೇವಾ ಸಕ್ರಮಾತಿಗೊಂಡಿರುವ ಇವರ ಪ್ರಕರಣವನ್ನು ಆಡಳಿತ ಇಲಾಖೆಯು ದಿನಾಂಕ: 13.11.2006ರ ಸುತ್ತೋಲೆಯನ್ವಯ ಪುನರ್ ಪರಿಶೀಲಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ. ಈ ಪ್ರಕ್ರಿಯೆ ಮುಗಿದ ನಂತರವೇ ಇವರ ವೈದ್ಯಕೀಯ ವೆಚ್ಚ ಮರು ಪಾವತಿ ಪ್ರಸ್ತಾವನೆಯನ್ನು ಪರಿಶೀಲಿಸಬಹುದಾಗಿರುತ್ತದೆ ಎಂದು ತಿಳಿಸಲಾಗಿದೆ.

(ಸರ್ಕಾರದ ವಿಶೇಷ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ.)

Gayathri M.R. 8/3/17

(ಗಾಯತ್ರಿ. ಎಂ.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ
(ಆಡಳಿತ ಮತ್ತು ಸಮನ್ವಯ)

11.03.17

US.(P)-2

14/3/17

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ.ಎಂ.ಸಿ.ಮಾಯೀಗೇಗೌಡ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ಇಲಾಖೆ, ಇವರ ವೈದ್ಯಕೀಯ ವೆಚ್ಚ ಮರುಪಾವತಿಸುವ ಬಗ್ಗೆ.

ಓದಲಾಗಿದೆ: 1) ವಾಣಿಜ್ಯ ತೆರಿಗೆ ಆಯುಕ್ತರ ಪತ್ರ ಸಂಖ್ಯೆ:ವಾತೆಆ/ ನಗದು-3/ ಸಿಆರ್-4 / 2010-11, ದಿನಾಂಕ 11-12-2014, 09-06-2015, 10-03-2016, 05-10-2016 & 08-06-2017.

2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಂಡಿಎ (ಬೆಂವಿ)696/2014-15, ದಿನಾಂಕ 01-08-2014.

********

**ಪ್ರಸ್ತಾವನೆ:**

ಶ್ರೀ.ಎಂ.ಸಿ.ಮಾಯೀಗೇಗೌಡ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ಇಲಾಖೆ, ಇವರು ದಿನಾಂಕ 26-7-2010 ರಿಂದ 28-7-2010 ರವರೆಗೆ ತುರ್ತು ಪರಿಸ್ಥಿತಿಯಲ್ಲಿ ಹೃದಯದ ಶಸ್ತ್ರಚಿಕಿತ್ಸೆಯನ್ನು Fortis Hospital Ltd., ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು ಇಲ್ಲಿ ಮಾಡಿಸಿದ್ದು, ಅದಕ್ಕೆ ತಗುಲಿದ ವೆಚ್ಚ ರೂ.1,79,560/-ಗಳನ್ನು ಮರುಪಾವತಿಸುವಂತೆ ಸದರಿಯವರು ಕೋರಿರುವುದಾಗಿ ತಿಳಿಸಿರುತ್ತಾರೆ. ಸದರಿ ಆಸ್ಪತ್ರೆಯು ಖಾಸಗಿ ಆಸ್ಪತ್ರೆಯಾಗಿರುವುದರಿಂದ (ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆ) ಈ ಚಿಕಿತ್ಸೆಗೆ ತಗುಲಿದ ವೆಚ್ಚನ್ನು ಮರುಪಾವತಿಸಲು ಕೋರಿದ್ದು, ವೈದ್ಯಕೀಯ ಹಾಜರಾತಿ ನಿಯಮಗಳನ್ನು ಸಡಿಲಿಸಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಕುರಿತಾಗಿ ಸರ್ಕಾರದ ಮಂಜೂರಾತಿಗಾಗಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಪತ್ರದಲ್ಲಿ ವಾಣಿಜ್ಯ ತೆರಿಗೆ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಈ ಕುರಿತು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಇವರು ಮೇಲೆ ಕ್ರ.ಸಂ. (2) ರಲ್ಲಿ ಓದಲಾದ ಪತ್ರದಲ್ಲಿ ಸದರಿ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿಸಿದ್ದಲ್ಲಿ, ರೂ.1,79,560/-ರ ಪೈಕಿ ಸದರಿ ಚಿಕಿತ್ಸೆಗೆ ಮೊತ್ತ ರೂ.1,58,000/- ವೆಚ್ಚವಾಗುತ್ತಿತ್ತೆಂದು ದೃಢೀಕರಿಸಿದ್ದಾರೆ. ಆ ಸಮಯದಲ್ಲಿ, ಸದರಿ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದಿಲ್ಲದಿರುವ ಕಾರಣ, ತದನಂತರ, ದಿನಾಂಕ 15-11-2010 ರಂದು ಸದರಿ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದಿರುತ್ತದೆ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಇವರಿಂದ ಅರ್ಹತಾ ಮೊತ್ತ ರೂ.1,58,000/- ಪಡೆದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮಂಜೂರಾತಿ ನೀಡುವಂತೆ ವಾಣಿಜ್ಯ ತೆರಿಗೆ ಆಯುಕ್ತರು ಕೋರಿದ್ದಾರೆ.

--2

**ಸರ್ಕಾರಿ ಆದೇಶ ಸಂಖ್ಯೆ: ಆಇ 31 ವಾತೆಸಿ 2015 ಬೆಂಗಳೂರು, ದಿನಾಂಕ: 4-6-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ.ಎಂ.ಸಿ.ಮಾಯೀಗೇಗೌಡ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ಇಲಾಖೆ, ಇವರು ದಿನಾಂಕ 26-7-2010 ರಿಂದ 28-7-2010 ರವರೆಗೆ ತುರ್ತು ಪರಿಸ್ಥಿತಿಯಲ್ಲಿ ಹೃದಯದ ಶಸ್ತ್ರಚಿಕಿತ್ಸೆಯನ್ನು ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಯಾದ Fortis Hospital Ltd., ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು ಇಲ್ಲಿ ಮಾಡಿಸಿರುವುದನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ 31 ರಿಂದ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ನಿಯಮ 14ನ್ನು ಸಡಿಲಿಸಿ ಇವರಿಗೆ ವೈದ್ಯಕೀಯ ವೆಚ್ಚವಾಗಿ ಒಟ್ಟು ಮೊತ್ತ ರೂ.1,58,000/-ಗಳು (ಒಂದು ಲಕ್ಷದ ಐವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಮರುಪಾವತಿಸಲು ಸದರಿ ಚಿಕಿತ್ಸೆಯ ಮೊತ್ತವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರೆ ಮೂಲಗಳಿಂದ ಹಿಂಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 31 ಎಸ್ಎಂಆರ್ 2014, ದಿನಾಂಕ 05-11-2014 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ವೈದ್ಯಕೀಯ ವೆಚ್ಚ ಮರುಪಾವತಿಗೆ ಮಂಜೂರಾತಿ ನೀಡಲು ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಈ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

S.V 04/06/18
(ಕಲಾವತಿ.ಎಸ್.ವಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.-2 & ಸಮನ್ವಯ).

ಪ್ರಕಟಿಸಲಾಗಿದೆ
ದಿನಾಂಕ 12/6/18

**ಇವರಿಗೆ:**

1) ಮಹಾಲೇಖಪಾಲರು (ಎ ಆಂಡ್ ಇ), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಗಾಂಧಿನಗರ, ಬೆಂಗಳೂರು. (ಮೂಲ ಬಿಲ್ಲುಗಳೊಂದಿಗೆ).
3) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
4) ಸಂಬಂಧಿಸಿದ ನಿವೃತ್ತ ನೌಕರರಿಗೆ (ವಾಣಿಜ್ಯ ತೆರಿಗೆಗಳ ಆಯುಕ್ತರ ಮುಖಾಂತರ).
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ANNX- 3

507

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

T-No:427/2022-23
ಸಂಖ್ಯೆ: ಸಿಬ್ಬಂದಿ(3)/2ಡಿ/ಸಿ.ಆರ್-06/
ಅಜಾ-ಅಬು ಆಯೋಗ/2014-15

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1,
ಗಾಂಧಿನಗರ, ಬೆಂಗಳೂರು-560 009
ದಿನಾಂಕ: 13 -09-2022

ಇವರಿಗೆ,

ಕಾರ್ಯದರ್ಶಿಗಳು,
ರಾಜ್ಯ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ,
ನಂ. 14/03, 2ನೇ ಮಹಡಿ,
ಸಿ.ಎಫ್.ಸಿ ಕಟ್ಟಡ, ನೃಪತುಂಗ ರಸ್ತೆ
ಬೆಂಗಳೂರು-560 001.

1733685
16/9/22

ಮಾನ್ಯರೇ,

ವಿಷಯ: ಶ್ರೀ. ಜಿ. ವಿ. ರಾಮು ಮತ್ತು ಇತರರು, ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು ಇಲ್ಲಿ ದಾಖಲಿಸಿದ್ದ ಪ್ರಕರಣ ಸಂಖ್ಯೆ: 131/2016(ಸೇವೆ)ರಲ್ಲಿನ ಪ್ರಸ್ತುತ ಹಂತದ ಮಾಹಿತಿಯನ್ನು ಒದಗಿಸುವ ಕುರಿತು.

ಉಲ್ಲೇಖ:
1. ಮಾನ್ಯ ಆಯೋಗದ ಪ್ರಕರಣ ಸಂಖ್ಯೆ: 131/2016(ಸೇವೆ)ರಲ್ಲಿ ದಿನಾಂಕ 02-03-2018 ರಂದು ನೀಡಿದ ಆದೇಶ.
2. ಸರ್ಕಾರದ ಪತ್ರ ಸಂಖ್ಯೆ: ಆ ಇ 37 ವಾತೆಇ 2018 ದಿನಾಂಕ: 29-08-2020
3. ಈ ಕಛೇರಿ ಪತ್ರ ಸಂಖ್ಯೆ: ಸಿಬ್ಬಂದಿ-3/2ಡಿ/ಸಿಆರ್-06/2014-15 ದಿನಾಂಕ: 04-11-2020.
4. ಸರ್ಕಾರದ ಪತ್ರ ಸಂಖ್ಯೆ: ಆ ಇ 90 ವಾತೆಸಿ 2022 ದಿನಾಂಕ: 26-07-2022

CT-2

*******

16/9/22

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಇಲಾಖೆಯಲ್ಲಿ ನೌಕರರಾಗಿರುವ ಶ್ರೀ. ಜಿ. ವಿ. ರಾಮು ಮತ್ತು ಇತರರು ಮಾನ್ಯ ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು ಇಲ್ಲಿ ಪ್ರಕರಣ ಸಂಖ್ಯೆ: 131/2016(ಸೇವೆ)ನ್ನು ದಾಖಲಿಸಿದ್ದು, ಈ ವಿಷಯಕ್ಕೆ ಸಂಬಂಧಪಟ್ಟಂತೆ ಆಯೋಗವು ದಿನಾಂಕ 02-03-2018ರಂದು ಆದೇಶ ನೀಡಿರುತ್ತದೆ.

13/09/22

2-ಶಿಖಾ

ಮುಂದುವರೆದು, ಮಾನ್ಯ ಆಯೋಗವು ದಿನಾಂಕ: 02-03-2018 ರಂದು ನೀಡಿದ್ದ ಆದೇಶವನ್ನು ಅನುಷ್ಠಾನಗೊಳಿಸುವ ಸಂಬಂಧ, ಸರ್ಕಾರವು ನೀಡಿದ್ದ ಸ್ಪಷ್ಟೀಕರಣವನ್ನು ಮಾನ್ಯ ಆಯೋಗದ ಗಮನಕ್ಕೆ ಉಲ್ಲೇಖ(3) ರ ಪತ್ರದ ಮೂಲಕ ಸಲ್ಲಿಸಿದೆ. ಅಲ್ಲದೇ, ಮಾನ್ಯ ಸರ್ಕಾರವು ಮೇಲ್ಕಂಡ ಉಲ್ಲೇಖ (4)ರ ಪತ್ರದಂತೆ ಸದರಿ ಪ್ರಕರಣದ ಮುಕ್ತಾಯಗೊಳಿಸುವ ಬಗ್ಗೆ ಆಯೋಗಕ್ಕೆ ಈಗಾಗಲೇ ಸಲ್ಲಿಸಿದ್ದ ಸರ್ಕಾರದ ಸ್ಪಷ್ಟೀಕರಣವನ್ನು ಮತ್ತೊಮ್ಮೆ ಸಲ್ಲಿಸುವಂತೆ ಸರ್ಕಾರವು ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಸ್ಪಷ್ಟೀಕರಣವನ್ನ ತಮ್ಮ ಕೃಪಾವಗಾಹನೆಗಾಗಿ ಈ ಕೆಳಕಂಡಂತೆ ಮತ್ತೊಮ್ಮೆ ಸಲ್ಲಿಸಿದೆ.

**" ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ: 10-08-2006 ಮತ್ತು 06-01-2007ರ ಆದೇಶಗಳನ್ವಯ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಿರುವ ಆದೇಶವನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮತ್ತು ಗೌರವಾನ್ವಿತ ಉಚ್ಚ ನ್ಯಾಯಾಲಯಗಳು ಪರಿಗಣಿಸಿದ್ದು ಈ ರೀತಿ ಸಕ್ರಮಗೊಂಡ ಹನ್ನೊಂದು ನೌಕರರ ಜ್ಯೇಷ್ಠತೆಯ ಪ್ರಕರಣವನ್ನು ಪರಿಗಣಿಸುವಾಗ, ಕ್ರಮಬದ್ಧಗೊಳಿಸುವಿಕೆಯು ಆದೇಶವನ್ನು ಪುನರ್ ಪರಿಶೀಲಿಸಲು ಅಥವಾ ರದ್ದುಗೊಳಿಸಲು ಮಾನ್ಯ ನ್ಯಾಯಮಂಡಳಿ ಅಥವಾ ಮಾನ್ಯ ಉಚ್ಚ ನ್ಯಾಯಾಲಯ ರಾಜ್ಯ ಸರ್ಕಾರಕ್ಕೆ ಸ್ವಾತಂತ್ರವನ್ನು ಕಾಯ್ದಿರಿಸಿಲ್ಲ"**

ಆದುದರಿಂದ, ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಕೈಬಿಡಬೇಕೆಂದು ತಮ್ಮಲ್ಲಿ ಗೌರವಪೂರ್ವಕವಾಗಿ ಕೋರುತ್ತಿದ್ದೇನೆ.

ತಮ್ಮ ವಿಶ್ವಾಸಿ,

(ಸಿ. ಶಿಖಾ) ಭಾ.ಆ.ಸೇ.
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

**ಅಡಕ: ಉಲ್ಲೇಖ 2, 3 ಮತ್ತು 4ರ ಪತ್ರಗಳು**

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು-560001.
2. ಕಛೇರಿ ಪ್ರತಿ.